ಶ್ರೀ ಎನ್. ಬಸವಯ್ಯ —ತೆಂಗಿನ ಒಡ್ಡುಗಳನ್ನು ಕಟ್ಟುವುದಕ್ಕೆ ಚಿಕ್ಕನಾಯಕನ ಹಳ್ಳಿಯ ತಾಲೂಕಿನಲ್ಲಿ ಹೆಚ್ಚು ಹಣ ಖರ್ಚು ಮಾಡಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಲ್ಲಿ ಪ್ರಾರ್ಥನ ಮಾಡಿದರೂ ಕೂಡ ಈ ಬಗ್ಗೆ ಅವರು ಗಮನ ಕೊಟ್ಟಿಲ್ಲ. ಆದ್ದರಿಂದ ಜರೂರಾಗಿ ಅಲ್ಲಿ ತೆಂಗಿನ ಒಡ್ಡುಗಳನ್ನು ಕಟ್ಟಿಸುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಕೆ.ಎಚ್. ಪಾಟೀಲ್ —ಎಂ.ಎಫ್.ಎ.ಎಲ್. ಸ್ಕೀಮಿನಲ್ಲಿ ೨೦ ಲಕ್ಷ ರೂಪಾಯಿಗಳನ್ನು ಅಲ್ಲಲ್ಲಿ ಸರ್ಕಾರದವರು ಖರ್ಚು ಮಾಡಿದ್ದಾರೆ. ಆದರೆ ನಿರೀಕ್ಷಿಸಿದಷ್ಟು ಹಣ ಖರ್ಚು ಆಗಿಲ್ಲ ಅಧಿಕಾರಿಗಳು ಈ ರೀತಿ ತಮ್ಮ ಸಲಹೆಗಳನ್ನು ವಿಚಾರ ನಡೆದರೆ, ಅದನ್ನು ನನ್ನ ಗಮನಕ್ಕೆ ತಂದರೆ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಶೇಗೌಡ.—ಕುಂದುಕೆರೆ ಹೋಬಳಿಯಲ್ಲಿ ಈ ಯೋಜನೆಯನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ.ಎಚ್. ಪಾಟೀಲ್.— ಈ ಎಂ.ಎಫ್.ಎ.ಎಲ್. ಯೋಜನೆಯ ಪ್ರಕಾರ ೩ ತಾಲ್ಲೂಕುಗಳನ್ನು ತೆಗೆದುಕೊಂಡಿದೆ. ಅವು ಮುಗಿದ ನಂತರ ಕೇಂದ್ರದ ಅನುಮತಿ ಪಡೆದು ಉಳಿದಿದ್ದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎಚ್. ಹನುಮೇಗೌಡ.—ಈ ಯೋಜನೆ ಈ ಮೂರು ತಾಲ್ಲೂಕುಗಳಿಗೆ ಮಾತ್ರ ಸೀಮಿತವಾಗಿದೆ ಎಂದು ಹೇಳಿದ್ದೀರಿ, ಈ ಮೂರು ತಾಲ್ಲೂಕುಗಳಲ್ಲಿಯೂ ಈ ಯೋಜನೆಯ ಪ್ರಕಾರ ಮಾಡತಕ್ಕ ಎಲ್ಲಾ ಕೆಲಸಗಳ ಬಗ್ಗೆಯೂ ಒಂದು ಯೋಜನೆಯನ್ನು ತಯಾರು ಮಾಡಿ, ಈ ಯೋಜನೆಯಲ್ಲಿ ತಯಾರು ಮಾಡಿರತಕ್ಕ ಕೆಲಸಗಳನ್ನು ಆಧ್ಯತೆಯ ಮೇಲೆ ಮಾಡಲಾಗಿದೆಯೇ ? ಮತ್ತು ಈ ಯೋಜನೆಗೆ ಸಂಬಂಧಪಟ್ಟಹಾಗೆ ಕೇಂದ್ರಸರ್ಕಾರದಿಂದ ಎಷ್ಟು ಹಣವನ್ನು ಕೊಡುತ್ತಾರೆ ? ರಾಜ್ಯ ಸರ್ಕಾರದವರು ಎಷ್ಟು ಹಣವನ್ನು ಕೊಡುತ್ತಾ?

ಶ್ರೀ ಕೆ.ಎಚ್. ಪಾಟೀಲ್.—ಈ ಯೋಜನೆಯ ಪ್ರಕಾರ ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡಿ ಅದರ ಪ್ರಕಾರ ಕಾರ್ಯಕ್ರಮಗಳು ನಡೆಯುತ್ತವೆ. ಈ ಯೋಜನೆಗೆ ಪೂರ್ಣವಾಗಿ ಕೇಂದ್ರದಿಂದ ಹಣ ಬರುತ್ತದೆ.

ಶ್ರೀ ಬಿ. ಪಾ. ಜಿ.—ತಿಪಟೂರು ತಾಲ್ಲೂಕು, ತುರುವೇಕೆರೆ ತಾಲ್ಲೂಕು ಮತ್ತು ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೆಂಗಿನ ಒಡ್ಡುಗಳನ್ನು ಹಾಕತಕ್ಕದ್ದು ಆಗಬೇಕಾಗಿದೆ. ಇದರಲ್ಲಿ ತಾರತಮ್ಯ ಇಲ್ಲ ಈ ಎಂ.ಎಫ್.ಎ.ಎಲ್. ಸ್ಕೀಮಿನಲ್ಲಿ ಅದಷ್ಟು ಬೇಗ ಹೆಚ್ಚು ಹಣವನ್ನು ಈ ತೆಂಗಿನ ಒಡ್ಡು ಹಾಕುವ ಖರ್ಚು ಮಾಡಬೇಕು ಎಂದು ನಾವು ಅನೇಕ ಸಾರಿ ಸರ್ಕಾರಕ್ಕೆ ಒತ್ತಾಯ ಮಾಡಿದ್ದೇವೆ. ಆದ್ದ ಈ ತಾಲ್ಲೂಕುಗಳಲ್ಲಿ ತೆಂಗಿನ ಒಡ್ಡು ಹಾಕುವುದಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ಕೊಡುತ್ತೀರಾ ?

ಶ್ರೀ ಕೆ.ಎಚ್. ಪಾಟೀಲ್.—ಅವಶ್ಯಕವಾಗಿ ಕೊಡುತ್ತೇವೆ.

UNIFORM TEACHING HOURS IN PRIMARY SCHOOLS

49. SRI B. G. BANAKAR (Hirekerur).—Will the Minister for Education be pleased to state.—

(a) whether the Government is aware that large number of Primary Schools are having teaching hours from 7-30 A. M. to 10-45 A. M. in the morning and from 2-30 P. M. to 5-25 P. M. in the afternoon while other Primary Schools are having teaching hours from 10-45 A. M. to 5-25 P. M. in the state;

---

* Asterisks indicate that remarks or speeches have not been received by the mamber concerned.

(*b*) whether the Government is aware that lot of inconvenience is caused to the primary school students in the absence of uniform teaching hours in primary schools in the State ;

(*c*) if so, the steps taken to prescribe uniform teaching hours either from 10-45 A. M. to 5 P. M. or 11-00 A. M. to 5-30 P. M. daily in all primary schools in the State ?

SRI A. K. BADARINARAYAN (Minister for Education).—

(*a*) Normal working hours in primary schools are between 7-30 to 11-00 A. M. and between 3 to 5 P M. except where the Deputy Directors of Public Instruction have approved alterations in these timings to suit local conditions prevailing in different areas of the State,

(*b*) No.

(*c*) Does not arise in view of reply to (*b*) above.

ಶ್ರೀ ಬಿ.ಜಿ. ಬಣಕಾರ್.—ಸ್ವಾಮಿ ನನ್ನ ಪ್ರಶ್ನೆಗೆ ಉತ್ತರವಾಗಿ ರಾಜ್ಯದಲ್ಲಿನ ವಿವಿಧ ಪ್ರದೇಶಗಳಲ್ಲಿರುವ ಸ್ಥಳೀಯ ಪರಿಸ್ಥಿತಿಗಳಿಗನುಸಾರವಾಗಿ ಶಾಲೆಗಳ ವೇಳೆಗಳಲ್ಲಿನ ಬದಲಾವಣೆಗಳನ್ನು ಶಿಕ್ಷಣಇಲಾಖೆಯ ಉಪ ಸಂಚಾಲಕರು ಮಾಡಿದ್ದಾರೆ ಎಂದು ಹೇಳಿದ್ದೀರಿ, ಹಳೆಯ ಮೈಸೂರಿನಲ್ಲಿ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿಯೂ ೧೦-೪೫ರಿಂದ ಸಾಯಂಕಾಲ ೫-೨೫ರವರೆಗೆ ಮಾತ್ರ ಇದೆ. ಮುಂಬೈ ಕರ್ನಾಟಕದಲ್ಲಿ ಎಲ್ಲಾ ಪ್ರಾಥಮಿಕ ಶಾಲೆಗಳೂ ಬೆಳಿಗ್ಗೆ ೭-೩೦ರಿಂದ ೧೧-೪೫ರವರೆಗೂ ಹಾಗೂ ಮಧ್ಯಾಹ್ನ ೨-೨೦ರಿಂದ ಸಾಯಂಕಾಲ ೫-೨೫ರವರೆಗೂ ಪಾಠದ ವೇಳೆಯಾಗಿರುವುದರಿಂದ ಚಿಕ್ಕಮಕ್ಕಳಿಗೆ ಮಳೆಗಾಲ್ಲಿದಲ್ಲಿ ಮತ್ತು ಚಳಿಗಾಲದಲ್ಲಿ ಬೆಳಗಿನ ವೇಳೆಯಲ್ಲಿ ಶಾಲೆಗಳಿಗೆ ಹೋಗುವುದಕ್ಕೆ ತೊಂದರೆಯಾಗಿದೆ. ಈ ಶಾಲೆಯ ವೇಳೆಯನ್ನು ಬದಲಾವಣೆ ಮಾಡುವುದಕ್ಕೆ ಅನೇಕ ಅಧಿಕಾರಿಗಳು ಅಪ್ಪಣೆ ಕೊಟ್ಟಿಲ್ಲ. ಆದ್ದರಿಂದ ಮುಂಬೈ ಕರ್ನಾಟಕದಲ್ಲಿರತಕ್ಕ ಸ್ಥಳೀಯ ಸಂಸ್ಥೆಯ ಶಾಲೆಗಳು, ತಾಲ್ಲೂಕ್‌ಬೋರ್ಡ್ ಶಾಲೆಗಳು ಮತ್ತು ಇತರ ಎಲ್ಲಾ ಶಾಲೆಗಳು ಪಾಠದ ವೇಳೆಯನ್ನು ಬದಲಾವಣೆ ಮಾಡಿಕೊಳ್ಳುವುದಕ್ಕೆ ತಾವು ಆದೇಶವನ್ನು ಕೊಡುತ್ತೀರಾ ?

†ಶ್ರೀ ಎ.ಆರ್. ಬದರೀನಾರಾಯಣ್.—ಮಕ್ಕಳ ಅನುಕೂಲಕ್ಕೋಸ್ಕರ ಸ್ಥಳಿಯ ಜನಗಳ ಒಂದು ಅಭಿಪ್ರಾಯದ ಮೇಲೆ ಹೇಗೆ ಬೇಕೋ ಹಾಗೆ ಶಾಲೆಗಳ ವೇಳೆಯನ್ನು ಗೊತ್ತು ಮಾಡಿದೆ. ಈಗ ಮುಂಬೈ ಕರ್ನಾಟಕದಲ್ಲಿರುವ ಶಾಲೆಗಳ ವೇಳೆಯನು ಬದಲಾಯಿಸಬೇಕು ಎಂದು ಮಾನ್ಯ ಸದಸ್ಯರು ಹೇಳುವುದಾದರೆ ಅನುಕೂಲ ಕಂಡುಬಂದರೆ ಅದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಾರೆ.

ಶ್ರೀ ಬಿ.ಜಿ. ಬಣಕಾರ್.—ಈಗ ನವ್ಯ ರಾಜ್ಯದಲ್ಲಿ ಸಾವಿರಾರು ಶಾಲೆಗಳು ಇವೆ. ಆದರೆ ದೊಡ್ಡ ದೊಡ್ಡ ಶಾಲೆಗಳಲ್ಲಿ ಮಾತ್ರ ಆಟಿಂಡರುಗಳು ಇದ್ದಾರೆ. ಉಳಿದ ಶಾಲೆಗಳಲ್ಲಿ ಶಿಕ್ಷಕರು ಮತ್ತು ಶಾಲಾ ಮಕ್ಕಳೇ ಶಾಲೆಗಳ ಕಸ ಹೊಡೆದು ಸ್ವಚ್ಛ ಮಾಡಿಕೊಳ್ಳುತ್ತಾರೆ. ಆದ್ದರಿಂದ ಕೊನೆಯ ಪಕ್ಷ ೭ನೇ ತರಗತಿ ಇರತಕ್ಕ ಶಾಲೆಗಳಲ್ಲಾದರೂ ಕಸವನ್ನು ಹೊಡೆಯುವುದಕ್ಕೆ ಸಿಪಾಯಿಗಳನ್ನು ನೇಮಿಸುವ ಬಗ್ಗೆ ಸರ್ಕಾರದವರು ಏನಾದರೂ ಯೋಚನೆ ಮಾಡುತ್ತೀರಾ ?

ಶ್ರೀ ಎ.ಆರ್.ಬದರೀನಾರಾಯಣ್,-ಪ್ರಾಥಮಿಕ ಶಾಲೆಗಳಲ್ಲಿ ಲಕ್ಷಾಂತರ ಮಕ್ಕಳು ಓದುತ್ತಿದ್ದಾರೆ. ಸಾವಿರಾರು ಶಾಲೆಗಳು ಇವೆ. ಆದ್ದರಿಂದ ಮಾತ್ರ ಸದಸ್ಯರು ಹೇಳತಕ್ಕ ಸಲಹೆಯನ್ನು ಆರ್ಥಿಕ ದೃಷ್ಟಿಯಿಂದ ಒಪ್ಪುವುದಕ್ಕಾಗುವುದಿಲ್ಲ ಎಂದು ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಮಕ್ಕಳು ಕೆಲಸದನ್ನು ಕಲಿತುಕೊಳ್ಳುವ ದೃಷ್ಟಿಯಿಂದ ಶಾಲೆಗಳಲ್ಲಿ ಗಾರ್ಡನಿಂಗ್ ಮಾಡುವುದು ಮತ್ತು ಶಾಲೆಯ ಆಹರಣವನ್ನು ಸ್ವಚ್ಛವಾಗಿಡುವುದು ಇವುಗಳನ್ನು ಕಲಿತುಕೊಳ್ಳುವ ದೃಷ್ಟಿಯಿಂದ ಇದನ್ನು ಮಾಡಿದೆ. ಮಾನ್ಯ ಸದಸ್ಯರು ಹೇಳಿದ್ದು ಅವಶ್ಯ ಕಂಡು ಬಂದರೆ ಆರ್ಥಿಕ ಪರಿಸ್ಥಿತಿ ಸ್ವಲ್ಪ ಉತ್ತಮವಾದಾಗ ಇದನ್ನು ಯೋಚನೆ ಮಾಡಬಹುದು.

ಶ್ರೀ ಬಿ.ಎಂ. ಬಂಗಿ.—ಈಗ ಶಾಲೆಗಳಿಗೆ ಕೇರ್ ಸಂಸ್ಥೆಯವರು ಕೊಡತಕ್ಕಂಥಾ ಆಹಾರದಿಂದ ಮಿಡ್ ಡೇ ಮಿಲ್ ತಯಾರು ಮಾಡುವುದಕ್ಕೆ ಶಿಕ್ಷಕರಿಗೆ ೨ ತಾಸು ೩ ತಾಸು ವೇಳೆ ಹಾಳಾಗುತ್ತದೆ. ಆದ್ದರಿಂದ ಈ ವೇಳೆ ಹಾಳಾಗದಂತೆ ಈ ಮಿಡ್ ಡೇ ಮಿಲ್ ಕೊಡುವುದಕ್ಕೆ ಇಷ್ಟು ವೇಳೆ ಮತ್ತು ಪಾಠ ಹೇಳಿಕೊಡುವುದಕ್ಕೆ ಇಷ್ಟು ವೇಳೆ ಗೊತ್ತು ಮಾಡಿ ಈ ಬಗ್ಗೆ ಒಂದು ವ್ಯವಸ್ಥೆ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ.ಆರ್. ಬದರೀನಾರಾಯಣ್.—ಕೇರ್ ಸಂಸ್ಥೆಯವರು ಕೊಡತಕ್ಕ ಆಹಾರ ಏನಿದೆ ಅದು ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಒದಗಿಸುವ ದೃಷ್ಟಿಯಿಂದ ಮಾತ್ರವಿದೆ. ಇದರಲ್ಲಿ ಕಾಲ ಹೆಚ್ಚು ಹೋಗುತ್ತದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾದರೆ ಇದನ್ನು ಹೇಗೆ ಪುನರ್ ವ್ಯವಸ್ಥೆ ಮಾಡಬೇಕು. ಇದರ ಅವಶ್ಯಕತೆ ಕಂಡುಬಂದರೆ ಯಾವ ರೀತಿ ಇದನ್ನು ಪುನರ್‌ವ್ಯವಸ್ಥೆ ಮಾಡಬೇಕು ಎಂದು ಮಾನ್ಯ ಸದಸ್ಯರ ಸಲಹೆ ಕೊಟ್ಟರೆ ಅದನ್ನು ಯೋಚನೆ ಮಾಡುತ್ತೇವೆ.

ಶ್ರೀ ಎಂ.ಎಜ್ ಜಯಪ್ರಕಾಶ್ ನಾರಾಯಣ್.— (ಅ) ಪ್ರಶ್ನೆಗೆ ಉತ್ತರವಾಗಿ ಪ್ರಾಥಮಿಕ ಶಾಲೆಗಳ ಕೆಲಸದ ವೇಳೆಯು ಸಾಮಾನ್ಯವಾಗಿ ಬೆಳಿಗ್ಗೆ ೭–೩೦ಯಿಂದ ೧೧ಗಂಟೆಯವರೆಗೆ ಮಧ್ಯಾಹ್ನ ೩ ಗಂಟೆಯಿಂದ ೫ ಗಂಟೆಯವರೆಗೆ ಎಂಬುದಾಗಿ ಗೊತ್ತುಮಾಡಿದ್ದೀರಿ. ಈ ಕಾಲ ಮಲೆನಾಡಿನಲ್ಲಿರುವವರಿಗೆ ಸರಿಹೋಗುತ್ತದೆಯೋ ಈ ಮಧ್ಯೆ ಇರತಕ್ಕ ವೇಳೆ ೧೧ರಿಂದ ೩ ಗಂಟೆಯವರೆಗೆ ಅವರು ಮಿಡ್ಡಿಮಿಲಗೋಸ್ಕರವಾಗಿ ಕಾಲ ಕಳೆಯುತ್ತಾರೋ ಅಥವಾ ಆಟಪಾಟಗಳಿಗೋಸ್ಕರ ಕಾಲ ಕಳೆಯುತ್ತಾರೋ ?

ಶ್ರೀ ಎ.ಆರ್.ಬದರೀನಾರಾಯಣ.—ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ೧೧ಗಂಟೆಯಾದ ಮೇಲೆ ಮನೆಗೆ ಹೋಗಿ ವಿಶ್ರಾಂತಿ ತೆಗೆದುಕೊಂಡು ಮಧ್ಯಾಹ್ನ ಪುನಃ ಶಾಲೆಗೆ ಬರುತ್ತಾರೆ ಮಲೆನಾಡಿನಲ್ಲಿ ಈ ವೇಳೆ ಸರಿಹೋಗುತ್ತಿಲ್ಲ. ಏಕೆಂದರೆ ಮಳೆಗಾಲದಲ್ಲಿ ಅವರಿಗೆ ಅಲ್ಲಿ ರಜ ಕೊಡಬೇಕಾದ ಸಮಸ್ಯೆ ಇದೆ. ಮಳೆಯಲ್ಲಿ ಹುಡುಗರು ನೆನೆದುಹೋಗುತ್ತಾರೆಂದು ಆ ಕಾಲದಲ್ಲಿ ಅಲ್ಲಿ ರಜ ಕೊಡಬೇಕೆಂದು ಹೇಳುತ್ತಿರುವುದರಿಂದ, ಅದನ್ನು ಸರ್ಕಾರ ಯೋಚನೆ ಮಾಡುತ್ತಿದೆ.

ಶ್ರೀ ಜಿ. ರಾಮೇಗೌಡ.—ಈ ಶಾಲೆಗಳಲ್ಲಿ ಕೆಲಸಮಾಡತಕ್ಕ ವೇಳೆಯನ್ನು ಉಪಾಧ್ಯಾಯರ ಅನುಕೂಲಕ್ಕಾಗಿ ಡೆಪ್ಯುಟಿ ಡೈರೆಕ್ಟರ್ ಬದಲಾವಣೆ ಮಾಡುತ್ತಾ ಹೋದರೆ, ಅದು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಆ ರೀತಿ ಮಾಡುತಾ ಇಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ.ಆರ್. ಬದರೀನಾರಾಯಣ್.—ಉಪಾಧ್ಯಾಯರು ಇರತಕ್ಕದ್ದು ಖಂಡಿತವಾಗಿ ಮಕ್ಕಳ ವಿದ್ಯಾಭ್ಯಾಸದ ಅಭಿವೃದ್ಧಿಗಾಗಿ. ಅಂದಮೇಲೆ ಉಪಾಧ್ಯಾಯರು ಮಕ್ಕಳ ವಿದ್ಯಾಭ್ಯಾಸ ಅಭಿವೃದ್ಧಿಯಾಗುವುದನ್ನು ನೋಡುವುದು ಮುಖ್ಯ.

MADAM SPEAKER.— Question No. 88 and 208 deal with the same Subject. They may be taken up together.

FINALISATION OF REPORT OF BACKWARD CLASSES COMMISSION

88. SRI. K. SIDDAIAH.—(Santhemarahally).—

Will the Minister for Community Development and Social Welfare be pleased to state.—

(*a*) Whether the report of the Backward Classes Commission has been finalised.

(*b*) if not, when it is expected to be finalised.